ಮಾಡಿಲ್ಲ. ಎಲ್ಲಾ ಗೌರವಯುತ ಶಾಸಕರಿಗೆ ಧಕ್ಕೆ ತರುವಂತಹ ಕೆಲಸಗಳನ್ನು ಮಾಡಿದ್ದಾರೆ, ಇದಕ್ಕಾಗಿ ನಾನು ನ್ಯಾಯಾಲಯಕ್ಕೆ ಹೋಗಿದ್ದು ನಿಜ. ಇವತ್ತು ಸದನದ ಮುಖಾಂತರ ನಾನು ಕೇಳಿಕೊಳ್ಳುವುದಕ್ಕೆ ಇಚ್ಛಿಪಡುವುದೇನೆಂದರೆ, ಸಭಾಧ್ಯಕ್ಷರೆ, ಇದು ನ್ಯಾಯಾಲಯದಲ್ಲಿರುವುದರಿಂದ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಬಾರದೆನ್ನುವ ಆದೇಶವನ್ನು ಕೊಟ್ಟಿದ್ದೀರಿ, ಅದಕ್ಕಾಗಿ ನಾನು ಇಲ್ಲಿ ಮಾತನಾಡದೆ ಕುಳಿತಿದ್ದೇನೆ. ಇದು ಏನಾಗಿದೆ ಯಾವ ಹಂತದಲ್ಲಿದೆ, ಇವರು ಏನು ಮಾಡಿದ್ದಾರೆ, ಇವರು ಎಲ್ಲರನ್ನು ತಪ್ಪುದಾರಿಗೆ ಎಳೆಯುವಂತಹ ಕೆಲಸವನ್ನು ಮಾಡುವುದು ಬೇಡ ಎಂದು ಸರ್ಕಾರಕ್ಕೆ ನಾನು ಸ್ಪಷ್ಟೀಕರಣ ಕೇಳಬಯಸುತ್ತೇನೆ. ನ್ಯಾಯಾಲಯಕ್ಕೆ ಹೋಗುವ ಹಕ್ಕನ್ನು ನಮ್ಮಿಂದ ಇವರ್ಯಾರಿಗೂ ಕಸಿದುಕೊಳ್ಳಲು ಸಾಧ್ಯವಿಲ್ಲ, ಸಂವಿಧಾನಾತ್ಮಕವಾಗಿ ಕೋರ್ಟಿಗೆ ಹೋಗುವ ಹಕ್ಕು ನನಗಿದೆ, ಅದನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಹಿಂದಿನ ಸರ್ಕಾರದವರು ಮಾಡುವಾಗ ತಾವೇನು ಮಾಡಿದಿರಿ?

ಅಧ್ಯಕ್ಷರು : ಚರ್ಚೆಗೆ ಅವಕಾಶವಿಲ್ಲ, ಮುಂದಿನ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಶ್ರೀ ಸಿ.ಎಂ. ಲಿಂಗಪ್ಪನವರು ಕೇಳುವುದು.

ಕೆ.ಎಂ.ಎಫ್.ಗೆ ನೀಡಿರುವ ಸಾಲ

565 - ಶ್ರೀ ಬಿ. ಶಿವರಾಮ್ (ಗಂಡಸಿ), ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ), ಶ್ರೀ ಹೆಚ್.ಎಸ್. ಪುಟ್ಟರಂಗನಾಥ್ (ಬೇಲೂರು) ಶ್ರೀ ಎ. ಮಂಜು (ಆರಕಲಗೂಡು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಸರ್ಕಾರದಿಂದ ಕೆ.ಎಂ.ಎಫ್. ನವರಿಗೆ ನೀಡಿರುವ ಸಾಲದ ಮೊತ್ತವೆಷ್ಟು?*
2. *ಇದನ್ನು ತೀರುವಳಿ ಮಾಡಲು ನಿಗದಿಪಡಿಸಿದ ನಿಬಂಧನೆಗಳು ಮತ್ತು ಷರತ್ತುಗಳು ಏನು?*
3. *ಈ ಹಣವನ್ನು ಕೆ.ಎಂ.ಎಫ್. ಸಂಸ್ಥೆಯು ಯಾವ ಯಾವ ಉದ್ದೇಶಗಳಿಗೆ ಹಣವನ್ನು ಯಾವ ಅವಧಿಗಳಲ್ಲಿ ಉಪಯೋಗಿಸಿಕೊಂಡಿದ್ದಾರೆ?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

		(ರೂ. ಕೋಟಿಗಳಲ್ಲಿ)
1.	ಡೈರಿ ವ್ಯವಹಾರಿಕ ಖೋತಾ ಸಾಲ	35.26
	ಬ್ರಿಡ್ಜ್ ಲೋನ್	1.50
	ದೆಂಪೋ ಡೈರಿ ಖರೀದಿ ಸಾಲ	2.80
	ಒಟ್ಟು ಮೊತ್ತ	**39.56**

2. ಈ ಕೆಳಕಂಡ ನಿಬಂಧನೆಗಳು ಮತ್ತು ಷರತ್ತುಗಳೊಂದಿಗೆ ಸರ್ಕಾರವು ಕರ್ನಾಟಕ ಹಾಲು ಮಹಾ ಮಂಡಳಕ್ಕೆ ವ್ಯವಹಾರಿಕ ಖೋತಾ ಸಾಲವನ್ನು ಬಿಡುಗಡೆಗೊಳಿಸಿದೆ.

ಅ) ಡೈರಿ ವ್ಯವಹಾರಿಕ ಖೋತಾ ಸಾಲ

ಸಾಲ ಕಾಲಾವಧಿ ಮರುಪಾವತಿ ಮಾಡುವುದಕ್ಕೆ ಏನಾದರೂ ಕಾಲ ನಿಗದಿ ಪಡಿಸಲಾಗಿದೆಯೇ?	:	5 ವರ್ಷಗಳು ಸಂಬಂಧಿಸಿರುವುದಿಲ್ಲ
ಮರುಪಾವತಿ ಪ್ರಾರಂಭಿಸಲು ನಿಗದಿಪಡಿಸಿರುವ ವರ್ಷ ಮತ್ತು ದಿನಾಂಕ ಮರುಪಾವತಿ ಮಾಡುವ ಬಗ್ಗೆ	:	ಡೈರಿ ವ್ಯವಹಾರಿಕ ಖೋತಾ ವನ್ನು ಲೆಕ್ಕಗಳನ್ನು ಪೂರ್ಣಗೊಳಿಸಿದ ಮೇಲೆ ಹೊಂದಾಣಿಕೆ ಮಾಡಲಾಗುವುದು.

ಬ) ಬ್ರಿಡ್ಜ್ ಸಾಲ

ಹಾಲು ಉತ್ಪಾದಕರ ಹಾಲಿನ ಪಟ್ಟಿಗಳನ್ನು ಹಣ ಬಡವಾಡೆ ಮಾಡಲು ಬ್ರಿಡ್ಜ್ ಸಾಲವಾಗಿ ಮಂಜೂರು ಮಾಡಲಾಗಿದೆ. ಈ ಸಾಲವನ್ನು 31-3-1994 ರ ಒಳಗೆ ಸರ್ಕಾರಕ್ಕೆ ಮರುಪಾವತಿಸುವ ಷರತ್ತಿನೊಂದಿಗೆ ಬಿಡುಗಡೆಯಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ ಎಹೆಚ್‌ಎಫ್ 44 ಕೆಡಿಸಿ 93, ದಿನಾಂಕ : 24-5-1993.

ಎ)	ಸಾಲದ ಕಾಲಾವಧಿ	31-3-1994
ಬಿ)	ಮರುಪಾವತಿ ಮಾಡುವುದಕ್ಕೆ ಏನಾದರೂ ಕಾಲಾವಧಿ ನಿಗದಿಪಡಿಸಲಾಗಿದೆಯೇ	31-3-1994
ಸಿ)	ಮರುಪಾವತಿ ಪ್ರಾರಂಭಿಸಲು ನಿಗದಿ ಪಡಿಸಿರುವ ವರ್ಷ ಮತ್ತು ದಿನಾಂಕ	31-3-94ಕ್ಕೆ ಮುನ್ನಾ ಮರು ಪಾವತಿ ಮಾಡಬೇಕು.
ಡಿ)	ಬಡ್ಡಿಯ ದರ	ಶೇಕಡ 18
ಇ)	ಸಾಮಾನ್ಯ ಬಡ್ಡಿ ದರ	ಶೇಕಡಾ 18
ಎಫ್)	ಅವಧಿಗೆ ಮುನ್ನ ಸಾಲದ ಮರು ಪಾವತಿಗೆ ಇರುವ ರಿಯಾಯಿತಿ	
ಜಿ)	ಸಾಲದ ಕಂತುಗಳ ಮರುಪಾವತಿ ವಿಧಿಸುವ ದಂಡ ರೂಪದ ಬಡ್ಡಿ ದರ	ಶೇಕಡಾ 4

ಕ) ದೆಂಪೋ ಡೈರಿ ಖರೀದಿ ಸಾಲ

ಸರ್ಕಾರಿ ಆದೇಶ ಸಂಖ್ಯೆ: ಎಹೆಚ್‌ಎಫ್ 61 ಕೆಡಿಸಿ 91 ದಿನಾಂಕ. 30-3-1995

ರೀತ್ಯಾ ಈ ಮೊತ್ತವನ್ನು ದೆಂಪೋ ಡೈರಿಯ ಖರೀದಿಗಾಗಿ ಮಂಜೂರು ಮಾಡಲಾಗಿದೆ. ಈ ಸಾಲದ ನಿಬಂಧನೆ ಮತ್ತು ಷರತ್ತುಗಳು ಈ ಕೆಳಕಂಡಂತಿದೆ.

1. ಬಡ್ಡಿ ರಹಿತ ಸಾಲ.
2. ಅಸಲು ಹಣ ಮರುಪಾವತಿಸಲು 5 ವರ್ಷಗಳ ಅಧಿಕೃತ ಮುಂದೂಡಿಕೆ (Moritorium) ಸಮಯ ನೀಡುವುದರೊಂದಿಗೆ ಸಾಲವನ್ನು ಸಮ ಕಂತುಗಳಲ್ಲಿ ವರ್ಷಕ್ಕೊಮ್ಮೆ 10 ವರ್ಷಗಳ ಕಾಲಾವಧಿಯಲ್ಲಿ ಮರುಪಾವತಿಸತಕ್ಕದ್ದು.

3) ಕರ್ನಾಟಕ ಸರ್ಕಾರವು ತಮ್ಮ ಇಲಾಖಾ ಸ್ವಾಮ್ಯದಲ್ಲಿದ್ದ ಸರ್ಕಾರದ ಡೈರಿ ಮತ್ತು ಶಿಥಿಲೀಕರಣ ಘಟಕಗಳನ್ನು ಕರ್ನಾಟಕ ಮಹಾಮಂಡಳಿಗೆ (ಹಿಂದಿನ ಕರ್ನಾಟಕ ಹೈನು ಅಭಿವೃದ್ಧಿ ನಿಗಮ) 1975 ಮತ್ತು 1984 ಈ ಎರಡು ಹಂತದಲ್ಲಿ ಕ್ರಮವಾಗಿ ಕರ್ನಾಟಕ ದಕ್ಷಿಣ ಭಾಗದ ಜಿಲ್ಲೆಗಳಾದ ಬೆಂಗಳೂರು, ಮೈಸೂರು, ಹಾಸನ, ಕೂರ್ಗ್ (1975) ಹಾಗೂ ಉತ್ತರ ಕರ್ನಾಟಕ ಜಿಲ್ಲೆಗಳಾದ ಧಾರವಾಡ, ಬೆಳಗಾಂ ಬಿಜಾಪುರ, ಗುಲ್ಬರ್ಗಾ, ಶಿವಮೊಗ್ಗ, ಜಿಲ್ಲೆಗಳಲ್ಲಿ (1984) ಡೈರಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಡಿ ಕ್ಷೀರಧಾರ 2 ಮತ್ತು 3 ಹಂತಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಇಲಾಖಾ ಸ್ವಾಮ್ಯದಲ್ಲಿದ್ದ ಡೈರಿಗಳನ್ನು ಕರ್ನಾಟಕ ಹಾಲು ಮಹಾಮಂಡಳಕ್ಕೆ ವರ್ಗಾಯಿಸಲಾಯಿತು, ಕರ್ನಾಟಕ ಹಾಲು ಮಹಾಮಂಡಳಕ್ಕೆ ವರ್ಗಾಯಿಸುವ ಆದೇಶದಲ್ಲಿ ಪ್ರಾರಂಭದಲ್ಲಿ ಸದರಿ ಡೈರಿ ಘಟಕಗಳು ಅನುಭವಿಸುವ ನಗದು ಹಾನಿಯನ್ನು ಅನುದಾನದ ರೂಪದಲ್ಲಿ ಸರ್ಕಾರದಿಂದ ಪುನರ್ ಭರಿಸಲಾಗುವುದೆಂದು ಸೂಚಿಸಲಾಗಿತ್ತು. ಈ ಮೊತ್ತವನ್ನು 1976-77ರಿಂದ 1990-1991ರವರೆಗೂ ಉಪಯೋಗಿಸಲಾಗಿರುತ್ತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 5457ರ ಉತ್ತರ ಪಟ್ಟಿಯಲ್ಲಿ ಸಂಬಂಧಪಟ್ಟ ಸಚಿವರ ಸಹಿ ಇಲ್ಲದಿರುವ ಬಗ್ಗೆ

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್‌ಗೆ ವಿರುದ್ಧವಾಗಿ ಸಂಬಂಧಿಸಿದ ಮಂತ್ರಿಗಳ ಸಹಿ ಇಲ್ಲದಿರುವ ಉತ್ತರದ ಪ್ರತಿಯನ್ನು ಇವತ್ತು ಈ ಸದನಕ್ಕೆ ಸಲ್ಲಿಸಿದ್ದಾರೆ. ಎಲ್ಲಾ ಕಾನೂನುಗಳನ್ನು ಹೇಳುವಾಗ ಸಂಬಂಧಿಸಿದ ಮಂತ್ರಿಗಳ ಸಹಿ ಇಲ್ಲದಿರುವ ಉತ್ತರದ ಪ್ರತಿಯನ್ನು ಸದನಕ್ಕೆ ಒದಗಿಸುವ ಕಾನೂನು ಎಲ್ಲಿದೆ? ಇದು ತಮ್ಮ ರೂಲಿಂಗ್ ವಿರುದ್ಧವಾಗಿಯೇ ಇದೆ. ಕಾನೂನಿನ ಚೌಕಟ್ಟಿನಲ್ಲಿ ಇದು ಸಾಧ್ಯವೆ? ಯಾರಿಗೆ ಆಕೌಂಟಿಬಲಿಟಿ ಇದೆ ಎನ್ನುವುದನ್ನು ದಯವಿಟ್ಟು ಹೇಳಿ? ತಮ್ಮ ಆದೇಶಕ್ಕೆ ಇದರಲ್ಲಿ ಗೌರವ ಸಿಕ್ಕಿದೆಯೆ ಎನ್ನುವುದನ್ನು ತಾವೇ ನೋಡಿ.

ಶ್ರೀ ಡಿ.ವಿ. ಸದಾನಂದಗೌಡ : ಸರ್ಕಾರ ಎಷ್ಟು ಜವಾಬ್ದಾರಿಯುತವಾಗಿ ವರ್ತಿಸುತ್ತಿದೆ ಎನ್ನುವುದು ತಮ್ಮ ವ್ಯವಹಾರಗಳಿಂದ ಇಡೀ ಸದನಕ್ಕೆ ಗೊತ್ತಾಗುತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) : ಸ್ವಾಮಿ, ಇದಕ್ಕೆ ಮಾನ್ಯ ಸಹಕಾರ ಸಚಿವರಿಂದ ಅನುಮೋದಿಸಲ್ಪಟ್ಟಿದೆ ಎಂದು ಉತ್ತರದಲ್ಲಿ ನಮೂದು ಮಾಡಲಾಗಿದೆ.

ಶ್ರೀ ಎ. ರಾಮದಾಸ್ : ಪ್ರತಿಯೊಂದು ಉತ್ತರದ ಪ್ರತಿಗಳಿಗೆ ಸಂಬಂಧಿಸಿದ ಮಾನ್ಯ ಮಂತ್ರಿಗಳು ಸಹಿ ಮಾಡಬೇಕೆಂದು ಸಭಾಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ, ಇವತ್ತು ಬಂದಿರುವ ಎಲ್ಲಾ ಪ್ರಶ್ನೆಗಳ ಉತ್ತರಕ್ಕೆ ಸಂಬಂಧಿಸಿದ ಮಂತ್ರಿಗಳೇ ಸಹಿ ಮಾಡಿದ್ದಾರೆ, ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಮಂತ್ರಿಗಳು ಸಹಿ ಮಾಡಿರುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಪರವಾಗಿಲ್ಲ, ಉತ್ತರ ಕೊಡಲು ನಾನು ಇಲ್ಲಿದ್ದೇನೆ, ಇದು ನಾನು ಕೊಟ್ಟಿರುವ ಉತ್ತರವಾಗಿದೆ, ನೋಡಿ ಇದರಲ್ಲಿ ರಾಜಕೀಯ ಮಾಡುವುದು ಅಲ್ಲ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಅಧ್ಯಕ್ಷರಿಗೆ ಗೌರವ ಕೊಡುವುದು ರಾಜಕೀಯವೇ? ಈ ಸದನದ ಗೌರವವನ್ನು ಉಳಿಸುವುದು ರಾಜಕೀಯವೇ? ಅವರ ಆದೇಶವನ್ನು ಉಲ್ಲಂಘನೆ ಮಾಡಿದ್ದು ರಾಜಕೀಯವೇ?

ಅಧ್ಯಕ್ಷರು : ಬಹುಶಃ ಹಿಂದೆ ಅನೇಕ ಸಾರಿ ನಾನು, ಸದನಕ್ಕೆ ಉತ್ತರ ನೀಡುವಾಗ ಉತ್ತರದ ಪ್ರತಿಗೆ ಸಾಮಾನ್ಯವಾಗಿ ಸಂಬಂಧಿಸಿದ ಮಂತ್ರಿಗಳೇ ಸಹಿ ಮಾಡಿರಬೇಕೆಂದು ಹೇಳಿದ್ದೇನೆ. ಇಲ್ಲಿ ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಮಂತ್ರಿಗಳು ಉತ್ತರಕ್ಕೆ ಅನುಮೋದನೆ ಕೊಟ್ಟಿರುವುದರಿಂದ ಮತ್ತು ನಾನು ಸದನದಲ್ಲಿ ಈ ಪ್ರಶ್ನೆಯನ್ನು ಅಲೌ ಮಾಡಿರುವುದರಿಂದ, there is no question of raising any objections ಸಾಧ್ಯವಾದಷ್ಟು ಸಂಬಂಧಿಸಿದ ಮಂತ್ರಿಗಳು, ಉತ್ತರದ ಪ್ರತಿಗೆ ಸಹಿ ಮಾಡಬೇಕು, ದಯಮಾಡಿ ಇನ್ನು ಮುಂದೆಯಾದರು ಇದನ್ನು ತಿಳಿದುಕೊಳ್ಳಿ, ಈ ಇಕ್ಕಟ್ಟಿಗೆ ಸಿಲುಕಿಕೊಳ್ಳಬೇಡಿ, ಲಿಂಗಪ್ಪನವರೆ, ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಸಿ.ಎಂ. ಲಿಂಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ಸ್ನೇಹಿತರು ಪ್ರಶ್ನೆಗಳನ್ನು ಕೇಳಿದಾಗ ನಾವು ಬಹಳ ಸಭ್ಯವಾಗಿ ಕುಳಿತಿರುತ್ತೇವೆ, ದಯಮಾಡಿ ತಮ್ಮಿಂದ ಕೂಡ ಅದೇ ರೀತಿಯ ಸಭ್ಯತೆಯನ್ನು ನಾವು ನಿರೀಕ್ಷೆ ಮಾಡುತ್ತೇವೆ. 15 ದಿವಸಗಳ ನಂತರ ನನಗೆ ಸಂಬಂಧಿಸಿದ ಚುಕ್ಕೆ ಗುರುತಿನ ಪ್ರಶ್ನೆ ಇವತ್ತು ಬಂದಿದೆ, ತಾವು ಮಧ್ಯೆ ಎದ್ದು ಇಷ್ಟೊಂದು ಮಾತನಾಡುವುದಾದರೆ ನಾವು ಪ್ರಶ್ನೆಯನ್ನು ಹೇಗೆ ಕೇಳುವುದು?

ಪ್ರಶ್ನೆ ಸಂಖ್ಯೆ 5457 ಮತ್ತು 5421

ಇನ್ನು, ಈ ರಾಜ್ಯದ ಕೋಟ್ಯಾಂತರ ರೈತರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡುವ ಸಂಸ್ಥೆ ರಾಜ್ಯದಲ್ಲಿ ಕೆಲಸ ಮಾಡುತ್ತಿದೆ. ಅವರು ಸಾವಿರಾರು ಕೋಟಿ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡಿದ್ದಾರೆ, ಇಲ್ಲಿ ಮರುಪಾವತಿಯ ಬಗ್ಗೆ ಪ್ರಸ್ತಾಪವಿಲ್ಲ. ಮರುಪಾವತಿ ಮಾಡುವುದಕ್ಕೆ ಏನಾದರು ಕಾಲನಿಗದಿಪಡಿಸಲಾಗಿದೆಯೆ ಎಂದು ಕೇಳಿದರೆ ಉತ್ತರದಲ್ಲಿ "ಸಂಬಂಧಿಸಿರುವುದಿಲ್ಲ" ಎಂದು ಹೇಳುತ್ತಾರೆ. ಇವರು ಸಾಲವನ್ನು ತೆಗೆದುಕೊಂಡರೂ ಕೇಳುವಂತಿಲ್ಲ, ಮತ್ತು ಇವರು ಮರುಪಾವತಿ

ಮಾಡುವಂತಿಲ್ಲ, ಇವರು ಏನು ಬೇಕಾದರು ಮಾಡಿಕೊಂಡು ಹೋಗಬಹುದು. ಸಂವಿಧಾನಬದ್ಧವಾಗಿ ರಚನೆಯಾಗಿರುವ ಈ ಸಂಸ್ಥೆ ಈ ರಾಜ್ಯದಲ್ಲಿ ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬಂದು, ಸರ್ಕಾರದ ಯಾವುದೇ ಹಂಗು ಇಲ್ಲದೆ, ಸ್ವೇಚ್ಚಾಚಾರವಾಗಿ ಕೆಲಸ ಮಾಡುತ್ತಿದೆ ಎನ್ನುವ ಭಾವನೆ ಬರುತ್ತಿದೆ. ತಮ್ಮ ಮೂಲಕ ಸಚಿವರನ್ನು ಕೇಳುವುದೇನೆಂದರೆ, ಇದರ ಮೇಲೆ ಸರ್ಕಾರ ಏನು ಹತೋಟಿಯನ್ನು ಇಟ್ಟುಕೊಂಡಿದೆ? ಒಬ್ಬ ಐಎಎಸ್ ಅಧಿಕಾರಿಯನ್ನು ಹಿಂದಕ್ಕೆ ತೆಗೆದುಕೊಂಡು, ಅಲ್ಲಿ ಕೆಲಸ ಮಾಡುತ್ತಿರುವ ಇನ್ನೊಬ್ಬ ಅಧಿಕಾರಿಯನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡುತ್ತಾರೆ, ಮಧ್ಯಾಹ್ನ ಎರಡು ಗಂಟೆಗೆ ಸಭೆಗೆ ವಿಷಯ ಬರುತ್ತದೆ, ಮೂರು ಗಂಟೆಗೆ ತೀರ್ಮಾನವಾಗುತ್ತದೆ, ನಾಲ್ಕು ಗಂಟೆಗೆ ಆದೇಶ ಕೊಡುತ್ತಾರೆ, ಐದು ಗಂಟೆಗೆ ಅವರು ಪೂರ್ಣವಾಗಿ ಚಾರ್ಜ್ ತೆಗೆದುಕೊಂಡು ವ್ಯವಸ್ಥಾಪಕ ನಿರ್ದೇಶಕರಾಗುತ್ತಾರೆ. ಈ ರಾಜ್ಯದಲ್ಲಿ ಸರ್ಕಾರವಿದೆಯೇ? ಅವರು ಸರ್ಕಾರವನ್ನೇನಾದರೂ ಕೇಳಬೇಕಾಗಿತ್ತೆ? ಸರ್ಕಾರವೇನಾದರೂ ಅದಕ್ಕೆ ಅನುಮತಿ ಕೊಡಬೇಕಾಗಿತ್ತೇ? ಈ ಮಧ್ಯದಲ್ಲಿ ಯಾವುದೋ ಒಂದು ಸಂದರ್ಭದಲ್ಲಿ ಉಚ್ಚ ನ್ಯಾಯಾಲಯ ಒಂದು ಆದೇಶ ಕೊಡುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಪ್ರಶ್ನೋತ್ತರ ವೇಳೆಯಲ್ಲಿ ಉಪ ಪ್ರಶ್ನೆ ಕೇಳುವ ಬದಲು ಮಾನ್ಯ ಸದಸ್ಯರು ಭಾಷಣ ಮಾಡುತ್ತಿದ್ದಾರೆ.

ಶ್ರೀ ಸಿ.ಎಂ. ಲಿಂಗಪ್ಪ : ಭಾಷಣವಲ್ಲ, ರಿಲೆವೆಂಟ್ ಫ್ಯಾಕ್ಟ್ಸ್ ಹೇಳುತ್ತಿದ್ದೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಅದನ್ನು ಸ್ವೀಕರ್ ಹೇಳುತ್ತಾರೆ. ನೀವು ಏಕೆ ಹೇಳುತ್ತೀರಿ?

(ಗೊಂದಲ)

ಶ್ರೀ ಸಿ.ಎಂ. ಲಿಂಗಪ್ಪ : ನಾನು ಇನ್ನೂ ಕುಂಬಳಕಾಯಿ ಕಳ್ಳ ಎಂದು ಹೇಳೇ ಇಲ್ಲ. ಯಾರೂ ಹೆಗಲು ಮುಟ್ಟಿ ನೋಡಿಕೊಳ್ಳಬೇಕಾಗಿಲ್ಲ. ನಾನು ಇಡೀ ಆದೇಶವನ್ನು ಓದುವುದಿಲ್ಲ, 2-3 ಸಾಲುಗಳನ್ನು ಮಾತ್ರ ಓದುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಭಾಷಣ ಮಾಡುವುದು ಬೇಡ ಎಂದು ಹೇಳಿದೆ. ಬ್ರೀಫ್ ಆಗಿ ಹೇಳಲಿ ಎಂದು ಹೇಳಿದೆ. ಅದನ್ನು ಮಾಡಲಿ. ಅದು ಬಿಟ್ಟು ಎಂ.ಡಿ. ಯಾರು, ಆ ಸರ್ಕಾರ, ಈ ಸರ್ಕಾರ ಎಂದರೆ ನಮಗೂ ಸಹ ಮಾತನಾಡಲು ಬರುತ್ತದೆ.

ಶ್ರೀ ಸಿ.ಎಂ. ಲಿಂಗಪ್ಪ : ಯಾರನ್ನೂ ಕುಂಬಳಕಾಯಿ ಕಳ್ಳ ಎನ್ನಲು ನಾನು ತಯಾರಾಗಿಲ್ಲ.

ಅಧ್ಯಕ್ಷರು : ನೀವು ಒಂದಾದ ಮೇಲೆ ಒಂದು ಉಪ ಪ್ರಶ್ನೆಗಳನ್ನು ಕೇಳಿ. ಬೇಕಾದರೆ 6-7 ಉಪ ಪ್ರಶ್ನೆಗಳನ್ನು ಕೇಳಿ, ನನ್ನದೇನೂ ಆಭ್ಯಂತರವಿಲ್ಲ. ಆದರೆ ಭಾಷಣ ಮಾಡಬೇಡಿ. ಸಪ್ಲಿಮೆಂಟರೀಸ್ ಎಷ್ಟು ಬೇಕಾದರೂ ಕೇಳಿ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಎರಡು ಸಾಲುಗಳನ್ನು ಮಾತ್ರ ಓದುತ್ತೇನೆ.

"The State Government does not dispute the fact that the state

Government does not invest any amount towards the share capital of the 2nd Respondent society. Further under the Karnataka co-operative societies Act, No power is conferred on the state Government to interfere with internal affairs of the society". ನೂರಾರು ಕೋಟಿ ರೂಪಾಯಿಗಳ ಆಸ್ತಿ ಕೊಟ್ಟಿದ್ದಾರೆ, ನಿವೇಶನ ಕೊಟ್ಟಿದ್ದಾರೆ, ಇವರು ತೆಗೆದುಕೊಳ್ಳತಕ್ಕಂಥ ನೂರಾರು ಕೋಟಿ ರೂಪಾಯಿಗಳ ಸಾಲಕ್ಕೆ ಸರ್ಕಾರ ಗ್ಯಾರಂಟಿ ನೀಡುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಸಭೆಯ ಮುಂದಿರುವ ಪ್ರಶ್ನೆಯ ಉತ್ತರಕ್ಕೆ ಪೂರಕವಾಗಿ ಉಪ ಪ್ರಶ್ನೆಗಳನ್ನು ಕೇಳಬೇಕಷ್ಟೇ. ಅದು ಬಿಟ್ಟು ಎಲ್ಲವನ್ನೂ ಅವರೇ ಹೇಳುತ್ತಿದ್ದಾರೆ.

ಶ್ರೀ ಸಿ.ಎಂ. ಲಿಂಗಪ್ಪ : ನಾನು ಬಚ್ಚೇಗೌಡರನ್ನು ಪ್ರಶ್ನೆ ಕೇಳಲಿಲ್ಲ. ಸರ್ಕಾರವನ್ನು ಕೇಳಿದ್ದೇನೆ. ಸರ್ಕಾರ ಉತ್ತರ ಕೊಡಬೇಕು. ಬಚ್ಚೇಗೌಡರು ಇದಕ್ಕೆ ಸಂಬಂಧಪಟ್ಟವರಲ್ಲ.

ಅಧ್ಯಕ್ಷರು : ಶಿವಕುಮಾರ್‌ರವರೇ, ಅವರ ಒಂದೊಂದು ಪ್ರಶ್ನೆಗೂ ಉತ್ತರ ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ತರುವಂಥ ಅಮೆಂಡ್‌ಮೆಂಟಿಗೆ ಪೂರಕವಾಗಿ ಅವರ ಬಂಡವಾಳ ಏನಿದೆ ಎಂದು ಹೇಳಲಿ.

ಅಧ್ಯಕ್ಷರು : ಬಚ್ಚೇಗೌಡರೇ, ಮಂತ್ರಿಗಳು ಉತ್ತರ ಕೊಡುತ್ತಾರೆ, ತಾವು ಏಕೆ ಮಧ್ಯೆ ಮಾತನಾಡುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್ : ಅವರು ಪ್ರಶ್ನೆ ಕೇಳಿದ್ದಾರೆ, ನಾನು ಉತ್ತರ ಹೇಳುತ್ತೇನೆ. He was former Animal Husbandry Minister. He would assist me. ಅದಕ್ಕೇಕೆ ಗಾಬರಿ ಮಾಡಿಕೊಳ್ಳುತ್ತೀರಿ. ಗೌರವಾನ್ವಿತ ಸದಸ್ಯರು ಕೇಳಿರತಕ್ಕಂಥಾದ್ದಕ್ಕೆ ಉತ್ತರ ಒದಗಿಸಲಾಗಿದೆ. ಈ ಸಂಸ್ಥೆಯ ಮೇಲೆ ಸರ್ಕಾರಕ್ಕೆ ಏನಾದರೂ ಹತೋಟಿ ಇದೆಯೇ ಎಂದು ಕೇಳಿದರು. ಸರ್ಕಾರಕ್ಕೆ ಆ ಸಂಸ್ಥೆಯ ಮೇಲೆ ಹತೋಟಿ ಇಲ್ಲವೆಂದರೆ ನಾನು ಏಕೆ ಉತ್ತರ ಹೇಳುತ್ತೇನೆ? ಹತೋಟಿ ಇರುವುದರಿಂದ ಉತ್ತರ ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಲಿಂಗಪ್ಪನವರಿಗೆ ಗೊತ್ತಿಲ್ಲ, ಮೊದಲನೇ ಹತೋಟಿ ಎಂದರೆ ಈ ಪ್ರಶ್ನೆ ಹಾಕಿಸಿರುವುದೇ ಆಗಿದೆ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ಬಚ್ಚೇಗೌಡರೇ, ಮಂತ್ರಿಗಳು ಉತ್ತರ ಹೇಳುತ್ತಾರೆ, ತಾವು ಏಕೆ ಮಧ್ಯೆ ಎದ್ದು ನಿಲ್ಲುತ್ತೀರಿ? ಸಂಬಂಧಪಟ್ಟ ಮಂತ್ರಿಗಳಾಗಿ ಅವರು ಉತ್ತರಿಸುತ್ತಿದ್ದಾರೆ. ಅದರಲ್ಲಿ ನೀವೇಕೆ ಇಂಟರ್‌ಫಿಯರ್ ಆಗುತ್ತೀರಿ?

(ಈ ಹಂತದಲ್ಲಿ ಸದಸ್ಯರಾದ ಸಿ. ಬೈರೇಗೌಡರು ತಮ್ಮ ಸ್ಥಾನದಲ್ಲಿ ಕುಳಿತು ಮಾತನಾಡುತ್ತಿದ್ದರು)

ಶ್ರೀ ಡಿ.ಕೆ. ಶಿವಕುಮಾರ್ : ಡ್ರಾಫ್ಟ್ ಮಾಡಿ, ಬೇಡ ಅಂದವರು ಯಾರು? you can draft. But you can't accuse me like that.

ಅಧ್ಯಕ್ಷರು : ಬೈರೇಗೌಡರೇ, ನೀವು ಅಧ್ಯಕ್ಷರಿಗೆ ಅಡ್ರೆಸ್ ಮಾಡಿ ಮಾತನಾಡಿ. ಕುಳಿತುಕೊಂಡು ನೀವು ನೀವೇ ಮಾತನಾಡಿಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು : ಸದನದಲ್ಲಿ ಕೋಪತಾಪಗಳು ಬೇಡ. ಶಾಂತರೀತಿಯಿಂದ ನಡೆದುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್ ಡ್ರಾಫ್ಟಿಂಗ್‌ನ ವಿಚಾರ ನಮಗೂ ಗೊತ್ತಿದೆ. ಯಾವ ಡ್ರಾಫ್ಟಿಂಗ್ ಬೇಕಾದರೂ ಮಾಡಿ? ಯಾರು ಬೇಡ ಅಂದವರು?

(ಸಿ. ಬೈರೇಗೌಡರು ಕುಳಿತು ಮಾತನಾಡುತ್ತಿದ್ದರು)

ಅಧ್ಯಕ್ಷರು : ಬೈರೇಗೌಡರೇ, ತಾವು ಹಿರಿಯ ಸದಸ್ಯರು. ಚೇರ್‌ಗೆ ಅಡ್ರೆಸ್ ಮಾಡಿ ಹೇಳಿ. ಶಿವಕುಮಾರ್‌ರವರೇ ಅವರ ಉಪ ಪ್ರಶ್ನೆಗೆ ಉತ್ತರ ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್ : ಅವರು ಕೋರ್ಟ್ ಜಡ್ಜ್‌ಮೆಂಟಿನ ವಿಚಾರ ಹೇಳಿದರು. ನನಗೆ ಆ ಮಾಹಿತಿ ಇಲ್ಲ. ನಾನು ಮಾಹಿತಿ ತರಿಸಿಕೊಂಡು ನಂತರ ಹೇಳುತ್ತೇನೆ. ಅವರು ಕೇಳಿರುವ ಪ್ರಶ್ನೆಗೆ ನಾನು ಇಷ್ಟು ಹೇಳಲು ಸಾಧ್ಯ. ಇನ್ನೇನಾದರೂ ಪ್ರಶ್ನೆ ಕೇಳಿದರೆ ನಾನು ಉತ್ತರ ಹೇಳುತ್ತೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಉಪ ಪ್ರಶ್ನೆ ಇದೆ. ಇಲ್ಲಿ ನೂರಾರು ಕೋಟಿ ರೂಪಾಯಿಗಳ ರಾ-ಮೆಟೀರಿಯಲ್ ಅನ್ನು ಪಶು ಆಹಾರ ತಯಾರು ಮಾಡಲು ಕೊಂಡುಕೊಳ್ಳುತ್ತಿದ್ದಾರೆ ಎಂದು ಕೇಳಿದ್ದೇವೆ. ಸುಮಾರು ಒಂದು ಲಕ್ಷ ರೂಪಾಯಿಯ ವಾಟರ್ ಸಪ್ಲೈ ಕೆಲಸ ಮಾಡಬೇಕಾದರೂ, ಟೆಂಡರ್ ಕರೆದು ಕೆಲಸ ಮಾಡಬೇಕು ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಆದರೆ ಇಲ್ಲಿ ನೂರಾರು ಕೋಟಿ ರೂಪಾಯಿಗಳ ಮೆಟೀರಿಯಲ್‌ಗಳನ್ನು ಟೆಂಡರ್ ಇಲ್ಲದೇ ಪರ್ಚೇಸ್ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಬಂದು ಒಂದು ವರ್ಷವಾಯಿತು. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಬೇಕು. ಮತ್ತೊಂದು ಪ್ರಶ್ನೆ ಏನೆಂದರೆ ಹನುಮಂತಪ್ಪ ಎನ್ನುವ ಒಬ್ಬ ಹರಿಜನ ಅಧಿಕಾರಿಯಿದ್ದ. ಆತನನ್ನು ಬಳ್ಳಾರಿಗೋ, ಮತ್ತೊಂದು ಕಡೆಗೋ ಟ್ರಾನ್ಸ್‌ಫರ್ ಮಾಡಿದರು. ಅಲ್ಲಿ ನನಗೆ ಜಾಗ ಇಲ್ಲ ಎಂದು ಅವನು ಅಲ್ಲಿಂದ ಎಂಡಾರ್ಸ್‌ಮೆಂಟ್ ತಂದು ಕೊಟ್ಟರೆ, ಎರಡು ವರ್ಷದವರೆಗೆ ಪೋಸ್ಟಿಂಗ್ ಕೊಡದೇ, ಎರಡು ವರ್ಷವಾದ ಮೇಲೆ ಡಿಸ್‌ಮಿಸ್ ಮಾಡಿದ್ದಾರೆ. ಆ ವಿಚಾರವನ್ನು ನಾನು ನೋಡುತ್ತೇನೆ ಎಂದು ಇವರು ಲೆಟರ್ ಕಳುಹಿಸಿದ್ದಾರೆ. ಈ ರೀತಿಯ ಅನ್ಯಾಯಗಳು ಆಗುವುದಾದರೆ ಇವರಿಗೆ ಈ ಸಂಸ್ಥೆಯ ಮೇಲೆ ಕಂಟ್ರೋಲ್ ಇದೆಯೇ ಎಂದು ಕೇಳಬೇಕಾಗುತ್ತದೆ. ನಾನು ಮಂತ್ರಿಯಾಗಿದ್ದೇನೆ, ಅಧಿಕಾರವಿದೆ, ಕಂಟ್ರೋಲ್ ಇದೆ ಎಂದು ಹೇಳುತ್ತಾರೆ. ತಾವು ಮಂತ್ರಿಗಳಾಗಿ ಒಂದು ವರ್ಷವಾಯಿತು. ಇದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಸದಸ್ಯರಾದ ಕರಿಯಣ್ಣರವರು ಟೆಂಡರ್ ಎಂದು ಮತ್ತೊಂದು ವಿಚಾರ ಈಗ ಹೇಳುತ್ತಿದ್ದಾರೆ. ಅದಕ್ಕೆ ಪ್ರತ್ಯೇಕವಾಗಿ ಇನ್ನೊಂದು ಪ್ರಶ್ನೆ ಕಳುಹಿಸಲಿ, ನಾನು ಉತ್ತರಿಸುತ್ತೇನೆ.

ಒಬ್ಬ ಅಧಿಕಾರಿಯ ಬಗ್ಗೆಯೂ ಅವರು ಹೇಳುತ್ತಿದ್ದಾರೆ. ಆ ಬಗ್ಗೆ ನನಗೆ ಅವರು ಒಂದು ಕಾಗದ ಬರೆದ ನೆನಪು ಉಂಟು. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳುತ್ತೇನೆ. ಏನಾದರೂ ಅನ್ಯಾಯವಾಗಿದ್ದರೆ, ನಮ್ಮ ಮಟ್ಟದಲ್ಲಿ ಏನಾದರೂ ನ್ಯಾಯ ಒದಗಿಸಿ ಕೊಡಲು ಸಾಧ್ಯವಾದರೆ ಖಂಡಿತ ಒದಗಿಸಿ ಕೊಡುತ್ತೇವೆ.

ಶ್ರೀ ಕರಿಯಣ್ಣ : ಎಷ್ಟೆಷ್ಟು ಹಣ ಖರ್ಚಾಗಿದೆ ಎಂದು ಅವರೇ ಹೇಳಿದ್ದಾರೆ. ಅದು ಈ ಪ್ರಶ್ನೆಯಲ್ಲೇ ಇದೆ. ಅದಕ್ಕೆ ನಾನು ಪ್ರತ್ಯೇಕವಾದ ಪ್ರಶ್ನೆ ಕೇಳಬೇಕಾಗಿಲ್ಲ. ಹನುಮಂತಪ್ಪನವರ ವಿಷಯ ಪ್ರತ್ಯೇಕವಾದ ಪ್ರಶ್ನೆ ಇರಬಹುದು. ಆದರೆ ಇಲ್ಲ ಎಷ್ಟೆಷ್ಟು ಹಣ ಖರ್ಚಾಗಿದೆ, ಏನೇನಾಗಿದೆ ಎನ್ನುವ ವಿವರಗಳು ಇದರಲ್ಲೇ ಇದೆ. ಅದನ್ನು ಕೇಳಿದರೆ ಪ್ರತ್ಯೇಕವಾದ ಪ್ರಶ್ನೆ ಕಳುಹಿಸಿದರೆ ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ. ಅಲ್ಲಿ ವಿಪರೀತ ಲೋಪದೋಷಗಳಾಗಿವೆ. ಒಂದು ವರ್ಷದಲ್ಲಿ ಹೆಚ್ಚು ಕಡಿಮೆ ನೂರು ಕೋಟಿ ರೂಪಾಯಿಗಳ ರಾ-ಮೆಟೀರಿಯಲ್ ಅನ್ನು ಟೆಂಡರ್ ಕರೆಯದೇ ಪರ್ಚೇಸ್ ಮಾಡಿದ್ದಾರೆ. ಕೆ.ಎಂ.ಎಫ್. ನವರು ಎಷ್ಟೆಷ್ಟು ಹಣವನ್ನು, ಯಾವ ಯಾವ ಉದ್ದೇಶಗಳಿಗೆ, ಯಾವ ಯಾವ ಅವಧಿಯಲ್ಲಿ ಖರ್ಚು ಮಾಡಿದ್ದಾರೆ ಎಂದು ಇದರಲ್ಲಿ ಇದೆ. ಯಾವ ಯಾವ ಅವಧಿಯಲ್ಲಿ ಖರ್ಚು ಮಾಡಲಾಗಿದೆ ಎನ್ನುವುದಕ್ಕೆ ಅವರ ಹತ್ತಿರ ರೆಕಾರ್ಡ್ ಇರಬೇಕು. ವಿವರಗಳನ್ನು ನಂತರ ಕೊಡುತ್ತೇವೆ. ಇದನ್ನು ಮತ್ತೆ ಚರ್ಚೆಗೆ ಇಟ್ಟುಕೊಳ್ಳಿ. ಈ ಪ್ರಶ್ನೆಯನ್ನು ಕನ್‌ವರ್ಟ್ ಮಾಡಿಕೊಡಿ, ಅದರ ಬಗ್ಗೆ ನಮ್ಮ ಹತ್ತಿರ ಬಹಳ ವಿಚಾರಗಳು ಇವೆ.

ಅಧ್ಯಕ್ಷರು : ತಾವು ನೋಟೀಸ್ ಕೊಡಿ. ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಕನ್‌ವರ್ಟ್ ಮಾಡೋಣ.

ಶ್ರೀ ಕರಿಯಣ್ಣ : ಆಯಿತು, ಕೊಡುತ್ತೇವೆ. ಅರ್ಧ ಗಂಟೆ ಚರ್ಚೆಗೆ ಕನ್‌ವರ್ಟ್ ಮಾಡಿಕೊಡಿ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, 39 ಕೋಟಿ 59 ಲಕ್ಷ ರೂಪಾಯಿಗಳ ಮೂರು ರೀತಿಯ ಸಾಲವನ್ನು ಮಂಜೂರು ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಒಂದು ಡೈರಿ ವ್ಯವಹಾರಿಕಾ ಖೋತಾ ಸಾಲ, ಮತ್ತೊಂದು ಬ್ರಿಡ್ಜ್ ಸಾಲ, ಇನ್ನೊಂದು ಡೈರಿ ಖರೀದಿ ಸಾಲ ಎಂದು ಮೂರು ಬಗೆಯ ಸಾಲಕ್ಕೆ 39 ಕೋಟಿ 56 ಲಕ್ಷವನ್ನು ಸರ್ಕಾರ ಮಂಜೂರು ಮಾಡಿದೆ ಎಂದು ಹೇಳಿದ್ದಾರೆ. ಇದು ಸಾಲವಾದ್ದರಿಂದ ಮರುಪಾವತಿ ಆಗಲೇಬೇಕು. ಇದು ಮಂಜೂರಾಗಿರುವುದು 1994ರಲ್ಲಿ ಎಷ್ಟು ಕಂತಿನಲ್ಲಿ, ಎಷ್ಟು ಮರುಪಾವತಿ ಮಾಡಿದ್ದಾರೆ. ಎಂದು ಕೇಳಿರುವ ಎರಡನೆಯ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನೇ ಹೇಳಿಲ್ಲ. ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ, ಸಾಲ ಮಂಜೂರು ಮಾಡಬೇಕಾದರೆ ಕೆಲವು ನಿಬಂಧನೆಗಳನ್ನು ಹಾಕಲಾಗಿರುತ್ತದೆ. ಆ ಕಂಡೀಷನ್ನಿನ ಪ್ರಕಾರ, ಎಷ್ಟು ಸಾಲವನ್ನು ಎಷ್ಟು ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿತ್ತು, ಈಗ ಎಷ್ಟು ಕಟ್ಟಿದ್ದಾರೆ ಎನ್ನುವುದನ್ನು ಹೇಳಬೇಕು.

12.10 ಪಿ.ಎಂ

ಕೆ.ಎಂ.ಎಫ್. ರೈತರ ಹಿತದೃಷ್ಟಿಯಿಂದಿದ್ದರೂ ಸಹ ರೈತರಿಗೆ ವಿರುದ್ಧವಾಗಿರುವ ಅನೇಕ ಅವ್ಯವಹಾರಗಳು ನಡೆದಿದೆ ಎನ್ನುವ ದೂರುಗಳು ಬಂದಿವೆ, ಅವು ನಿಮ್ಮ ಗಮನಕ್ಕೆ ಬಂದಿದೆಯೇ?

ಸರ್ವೇಸಾಮಾನ್ಯವಾಗಿ ಅಪಾಯಿಂಟ್‌ಮೆಂಟ್‌ನಲ್ಲಿ ರೋಸ್ಟರ್ ನಿಯಮಗಳನ್ನು ಅನುಸರಿಸಿಲ್ಲವೆನ್ನುವ ಮತ್ತು ಬೇಕಾದವರಿಗೆ ಕೊಟ್ಟಿದ್ದಾರೆನ್ನುವ ದೂರು ಬಂದಿದೆ. ಎರಡನೆಯದಾಗಿ, ಜೇಷ್ಠತಾ ಪಟ್ಟಿ ಮೇಲೆ ಅಪಾಯಿಂಟ್ ಆಗಿದ್ದವರಿಗೆ ಸೀನಿಯಾರಿಟಿ ಪಟ್ಟಿ ಮಾಡಿ ಪ್ರಮೋಷನ್ ಕೊಡಬೇಕೆನ್ನುವ ನಿಬಂಧನೆ ಇದ್ದು, ಅದನ್ನು ಅನುಸರಿಸಿಲ್ಲವೆಂಬ ದೂರಿದ್ದು, ಅದು ನಿಜವೆ ಸುಳ್ಳೆ? ಅದರ ಬಗ್ಗೆ ತಾವು ಹೇಳಬೇಕು. ನಂತರ, ಸರ್ಕಾರದಿಂದ ಅಥವಾ ಯಾವ್ಯಾವುದೋ ಬ್ಯಾಂಕಿನಿಂದ ಕೋಟಿಗಟ್ಟಲೆ ಹಣವನ್ನು ಸಾಲವಾಗಿ ಪಡೆದು ಅದನ್ನು ಸರಿಯಾಗಿ ಖರ್ಚು ಮಾಡಿಲ್ಲ. ಸುಳ್ಳು ಲೆಕ್ಕಗಳನ್ನು ಕೊಟ್ಟಿದ್ದಾರೆ. ಖರ್ಚು ಮಾಡಿರುವ ಹಣ ಅನೇಕ ಸಂದರ್ಭಗಳಲ್ಲಿ ಲೋಪವಾಗಿದೆ. ಹೀಗೆ ಕೆಎಂಎಫ್ ಬಗ್ಗೆ ಅನೇಕ ದೂರುಗಳಿವೆ. ಈ ದೂರುಗಳಿದ್ದರೂ, ಲಿಂಗಪ್ಪನವರು ಕೇಳಿದ ಹಾಗೆ, ತಮಗೆ ಅದರ ಮೇಲೆ ಕಂಟ್ರೋಲ್ ಇದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಕಂಟ್ರೋಲ್ ಇದ್ದರೆ, ಇಷ್ಟು ಅವ್ಯವಹಾರಗಳ ಬಗ್ಗೆ ಹೇಳಿದ್ದು, ತಮ್ಮ ಗಮನಕ್ಕೆ ಬಂದಿದೆಯೇ? ಕರಿಯಣ್ಣನವರು ಹೇಳಿದ ಹಾಗೆ, ಎರಡು ವರ್ಷ ಒಬ್ಬ ಹರಿಜನ ಅಧಿಕಾರಿ ತನಗೆ ತೊಂದರೆ ಇದ್ದು, ಬೇರೆಡೆಗೆ ವರ್ಗ ಮಾಡಿ ಎಂದರೂ ಕೇಳಿಲ್ಲವೆಂದರೆ, ತಮಗೆ ಮಾನವೀಯತೆ ಇಲ್ಲವೆ? ಅವನು ಬಳ್ಳಾರಿಗೇ ಹೋಗಬೇಕೆ? ಕೆಎಂಎಫ್ ಛೇರ್ಮನ್‌ಗೆ ಡಿಕ್ಟೇಟರ್‌ಶಿಪ್ ಕೊಟ್ಟವರಾರು? ಎರಡು ವರ್ಷ ಅವನಿಗೆ ಜಾಗ ಕೊಡದೆ ಡಿಸ್‌ಮಿಸ್ ಮಾಡುತ್ತಾರೆಂದರೆ, ಅವರಿಗೆ ಅಧಿಕಾರ ಕೊಟ್ಟವರಾರು? ಹಾಗಾದರೆ, ಬಡಬಗ್ಗರು, ಅಸಹಾಯಕರು ಕೆಎಂಎಫ್‌ನಲ್ಲಿ ಇರುವ ಹಾಗಿಲ್ಲವೆ? ಅವರ ಸಂಬಂಧಿಕರೇ ಇರಬೇಕೆ? ಅವರಿಗೆ ಬೇಕಾದವರೇ ಇರಬೇಕೆ? ಪ್ರಶ್ನೋತ್ತರ ವೇಳೆಯಾದ್ದರಿಂದ ನಾನು ಅದರ ಬಗ್ಗೆ ವಿವರವಾಗಿ ಹೇಳುತ್ತಿಲ್ಲ. ಇದರಲ್ಲಿ ತಮ್ಮ ಕರ್ತವ್ಯವೇನು? ಏಕೆ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ? ಯಾರಿಗೆ ತಾವು ಹೆದರಿದ್ದೀರಿ? ಇದರ ಬಗ್ಗೆ ನಿಜಾಂಶ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್ : ಈ ಸಂಸ್ಥೆಗೆ 39 ಕೋಟಿ 56 ಲಕ್ಷ ರೂಪಾಯಿಗಳ ಸಾಲ ಕೊಟ್ಟಿದ್ದು, ಡೇರಿ ಡಿಫಿಸಿಟ್ ಲೋನ್‌ಗೆ 35 ಕೋಟಿ ರೂಪಾಯಿಗಳು, ಬ್ರಿಡ್ಜ್ ಲೋನ್‌ಗೆ ಒಂದೂವರೆ ಕೋಟಿ ರೂಪಾಯಿಗಳು, ದೆಂಪೋ ಡೇರಿ ಪರ್ಚೇಸ್ ಗೆಂದು ಎರಡು ಕೋಟಿ ರೂಪಾಯಿಗಳು ಮತ್ತು 80 ಲಕ್ಷ ರೂಪಾಯಿಗಳು, ಒಟ್ಟು 39 ಕೋಟಿ 56 ಲಕ್ಷ ರೂಪಾಯಿಗಳ ಸಾಲ ಕೊಡಲಾಗಿದೆ. ಆದ್ದರಿಂದ, ಡೇರಿ ಡಿಫಿಸಿಟ್‌ಗೆ ಸುಮಾರು ಐದು ವರ್ಷ ನಿಗದಿಪಡಿಸಿ, ಸುಮಾರು 35.26 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಇಷ್ಟರೊಳಗೇ ಫಿಕ್ಸೇಷನ್ ಮಾಡಬೇಕೆಂದು ಒಪ್ಪಂದದಲ್ಲಿ ಸೇರಿಸಿರಲಿಲ್ಲ. ಇನ್ನೊಂದು ಬ್ರಿಡ್ಜ್ ಲೋನ್ ದಿನಾಂಕ 31.3.1994ಕ್ಕೆ ಕೊಟ್ಟು, ಸುಮಾರು 18 ಪರ್ಸೆಂಟ್ ಬಡ್ಡಿ ಹಾಕಿ, ಅವಕಾಶ ಮಾಡಿಕೊಟ್ಟಿದೆ. ಬಿಡ್ಜ್ ಸಾಲ ಮತ್ತು ದೆಂಪೋ ಡೇರಿಗೆ ಕೊಟ್ಟ ಹಣ ಇವತ್ತಿನವರೆಗೂ ಸ್ವಲ್ಪ ಸಮಯವಾಗಿದ್ದರೂ ಮರುಪಾವತಿಯಾಗಿಲ್ಲ. ಬೇರೆ ಎಂಪ್ಲಾಯ್‌ಮೆಂಟ್ ಬಗೆಗಿನ ವಿಚಾರದಲ್ಲಿ, ಹನುಮಂತಪ್ಪ ಎನ್ನುವ ಅಧಿಕಾರಿಗೆ ಅನ್ಯಾಯವಾಗಿದೆ, ಅವ್ಯವಹಾರವಾಗಿದೆ ಎಂದು ಹೇಳಿದ್ದೀರಿ. ಅದರ ಬಗ್ಗೆ ಎನ್‌ಕ್ವಯರಿ ಆದಾಗ ನಾನು ವಿವರವಾಗಿ ಹೇಳುತ್ತೇನೆ. ಅದರ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಲಿ, ನಾನು ಪ್ರೈವೇಟಾಗಿ ನಮ್ಮ ಸಂಸ್ಥೆಯಲ್ಲಿ ಅವರು ಇದ್ದಾರೆಯೋ ಇಲ್ಲವೋ ಎಂದು ತಿಳಿಯುತ್ತೇನೆ. ಅವರನ್ನು ವಜಾ ಮಾಡಿದ್ದಾರೆಂಬ ಮಾಹಿತಿ ಮಾತ್ರ ನನಗೆ ತಿಳಿದಿದೆ. ಈಗ ಅವರು ಅದನ್ನು ಕೇಳಿದ ಮೇಲೆ, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಕೋಟ್ಯಾಂತರ ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ ಮತ್ತು ಹೊರದೇಶಗಳಿಂದ ಸಾಲ ತಂದು ಇಲ್ಲಿ ಇನ್‌ವೆಸ್ಟ್ ಮಾಡಿದ್ದಾರೆ. ಇದರ ಉದ್ದೇಶ, ನಿರ್ಭಾಗ್ಯ ಗ್ರಾಮಾಂತರ ಪ್ರದೇಶದ ರೈತರ ಶ್ರೇಯೋಭಿವೃದ್ಧಿಯಲ್ಲವೆ? ಅದಕ್ಕೆ ವಿರುದ್ಧವಾಗಿ ಇಷ್ಟೆಲ್ಲಾ ಅಲಿಗೇಷನ್ಸ್ ಇದ್ದರೂ, ಇದಕ್ಕೆ ಸಂಬಂಧಪಟ್ಟ ರಿಜಿಸ್ಟ್ರಾರ್ ಮುಂತಾದವರು ಬೇಕಾದಷ್ಟು ಜನರಿದ್ದೂ ಅವರೇನು ಮಾಡುತ್ತಿದ್ದಾರೆ? ಎಷ್ಟು ಸಾರಿ ಇನ್ಸ್‌ಪೆಕ್ಟ್ ಮಾಡಿದರು? ಏಕೆ ಈ ಅವ್ಯವಹಾರವನ್ನು ತಡೆಯಲಿಲ್ಲ? ಕರಿಯಣ್ಣನವರು ಹೇಳಿದ ಹಾಗೆ, ಅವರು ವಜಾ ಆಗಿ ಎರಡು ವರ್ಷಗಳಾಗಿ ಅಪಾಯಿಂಟ್‌ಮೆಂಟ್ ಕೇಳಿದರೂ ಕೂಡ ಕೊಟ್ಟಿಲ್ಲ. ಹಾಗಾದರೆ ಯಾರಿಗಾದರೂ ಬರೆದುಕೊಟ್ಟುಬಿಡಿ. ನಾವು ಕೇಳುವುದಿಲ್ಲ. ಯಾರಪ್ಪನ ಮನೆ ಆಸ್ತಿ? ಈ ಸಂಸ್ಥೆಯಲ್ಲಿ ಕೋಟಿಗಟ್ಟಲೆ ಹಣ ಹಾಕಿ, ಕೇಳುತ್ತೇನೆ, ಮಾಡುತ್ತೇನೆಂದು ಸುಲಭವಾಗಿ ಹೇಳುತ್ತೀರಲ್ಲ, ಎರಡು ವರ್ಷಗಳವರೆಗೆ ಅವನ ಗತಿಯೇನು? ಬೇರೆ ವ್ಯಕ್ತಿಯಾಗಿದ್ದರೆ ನೀವು ಬಿಡುತ್ತಿದ್ದಿರಾ? ಹರಿಜನ ಮತ್ತು ನಿರಪರಾಧಿ ಎಂದು ಹೇಳಿ ಅವನನ್ನು ವಜಾ ಮಾಡಿದರೆ ಹೇಗೆ?

MR. SPEAKER : Iam very sorry. You are repeating.

ಶ್ರೀ ಕೆ. ಹೆಚ್. ಹನುಮೇಗೌಡ : ಇಷ್ಟೆಲ್ಲಾ ಆಗಿದ್ದರೂ ಕೂಡ, ಇದಕ್ಕೆ ಸಂಬಂಧಪಟ್ಟ ಮೇಲಧಿಕಾರಿಗಳು ಏನು ಮಾಡುತ್ತಿದ್ದಾರೆ? ಅವರೇಕೆ ನೋಡಲಿಲ್ಲ? ಅವರ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ? ಇಷ್ಟೆಲ್ಲಾ ಅನಾನುಕೂಲವಾಗಿದ್ದು, ಅವ್ಯವಹಾರವಾಗಿದ್ದು, ಸ್ವಜನ ಪಕ್ಷಪಾತವಾಗಿದ್ದು, ನಿರಪರಾಧಿಗಳಿಗೆ ಕೇಳುವವರಿಲ್ಲವೆಂದು ಶಿಕ್ಷೆಯಾಗಿದ್ದು ನೋಡುತ್ತಾ ಕುಳಿತಿರುವ ಮೇಲಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳುತ್ತೀರಿ? ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್ : ಆದಷ್ಟು ಬೇಗನೆ ಇದರ ಬಗ್ಗೆ ವಿಚಾರಿಸಿ ಯಾವ ರೀತಿ ಸರಿಪಡಿಸಲು ಸಾಧ್ಯವಾಗುತ್ತದೆಂಬುದನ್ನು ನೋಡಿ, ಸರಿಪಡಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಸಹಕಾರಿ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಸಾಲದ ರೂಪದಲ್ಲಿ ಕೊಟ್ಟ ಹಣವೆಷ್ಟು? ಅದರ ಜೊತೆಗೆ, ಸಾಲ ಕೊಟ್ಟಿರುವುದಷ್ಟೇ ಅಲ್ಲ, ನನಗೆ ತಿಳಿದ ಪ್ರಕಾರ, ಸಾವಿರಾರು ರೂಪಾಯಿಗಳು ಈ ಸಂಸ್ಥೆಗಳು ತೆಗೆದುಕೊಂಡಿರುವ ಸಾಲವಾಗಿದ್ದು, ಅದಕ್ಕೆ ಸರ್ಕಾರ ಜಾಮೀನಾಗಿದೆ. ಜಾಮೀನಾಗಿರುವ ಹಣವೆಷ್ಟು? ಅನೇಕ ಸಂದರ್ಭಗಳಲ್ಲಿ ಈ ಸಾಲಕ್ಕೆ ಜಾಮೀನಾದ ಹಣವನ್ನು ಸಾಲ ತೆಗೆದುಕೊಂಡವರು ವಾಪಸ್ಸು ಕಟ್ಟದಿದ್ದರೆ, ಸರ್ಕಾರವೇ ಹುಟ್ಟು ಸಹಕಾರಿಗಳಿಗೆ ಸಾಲವನ್ನು ತೀರಿಸುವ ಪರಿಸ್ಥಿತಿ ಬಂದಿದ್ದು, ಅದು ನಿಮ್ಮ ಗಮನಕ್ಕೆ ಬಂದಿದೆಯೇ? ಹುಟ್ಟು ಸಹಕಾರಿಗಳು ತೆಗೆದುಕೊಂಡ ಸಾಲದಲ್ಲಿ ಸರ್ಕಾರ ಎಷ್ಟು ತೀರಿಸಿದೆ? ಇನ್ನೂ ಎಷ್ಟು ಹಣವನ್ನು ತೀರಿಸಬೇಕಾಗಿದೆ? ಕೆಎಂಎಫ್‌ನಲ್ಲಿ ಆಡಳಿತದ ವಿಷಯದಲ್ಲಿ ನ್ಯೂನತೆ, ಹಣಕಾಸಿನ ಅವ್ಯವಹಾರ ಎರಡೂ ಆಗಿದೆ ಎಂದು ನನಗೆ ತಿಳಿದು ಬಂದಿದೆ. ಮಂತ್ರಿಗಳು ಈ ವಿಷಯದಲ್ಲಿ ಈಗ ಸಾಧ್ಯವಾದರೆ ಸೂಕ್ತ ಉತ್ತರ ಕೊಡಲಿ. ಆಗಲಿಲ್ಲವೆಂದರೆ, ತಮ್ಮಲ್ಲಿ ನಾನು ಅನನ್ಯವಾಗಿ ಪ್ರಾರ್ಥಿಸುವುದೇನೆಂದರೆ, ಇದರ ಚರ್ಚೆಗೆ ಬೇರೆ ರೂಪದಲ್ಲಿ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ತಾವು ನೋಟೀಸ್ ಕೊಡಿ, ಅವಕಾಶ ಮಾಡಿಕೊಡುತ್ತೇನೆ.

SRI Y.K. RAMAIAH : You can convert it into half-an-hour discussion.

MR. SPEAKER : On merits I will decide ಈಗಲೇ ತೆಗೆದುಕೊಳ್ಳಲಾಗುವುದಿಲ್ಲ. ನೀವು ನೋಟೀಸ್ ಕೊಟ್ಟ ಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ನಾನು ಬರೆದು ಕಳುಹಿಸುತ್ತೇನೆ. ಈ ಪ್ರಶ್ನೆಗಳಿಗೆ ಅವರು ಸೂಕ್ತ ಉತ್ತರ ಕೊಡಬೇಕು.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಈ ಸಂಸ್ಥೆ ಮೇಲೆ ಬಾಕಿ ಇರುವ ಸಾಲ ಎಷ್ಟು? ದಂಡ ಎಂದೇನು ಹಾಕಿದ್ದೀರಿ, ಆ ದಂಡ ಮತ್ತು ಕೊಡಬೇಕಾದ ಹಣವನ್ನು ಮನ್ನಾ ಮಾಡಿ, ನಮ್ಮ ಕೈಯಲ್ಲಿ ಕೊಡಲಾಗುವುದಿಲ್ಲವೆಂದು ಅರ್ಜಿ ಹಾಕಿದ್ದಾರೆಂಬ ಸುದ್ದಿ ನನಗೆ ಬಂದಿದೆ. ಇದು ನಿಜವೆ? ಹಾಗಾದರೆ, ತಾವು ಅದನ್ನು ವಜಾ ಮಾಡುತ್ತೀರಾ?

ಶ್ರೀ ಬಿ.ಎನ್. ಬಚ್ಚೇಗೌಡ : ಸರ್ಕಾರಗಳು ನಮ್ಮ ಹಾಲು ಒಕ್ಕೂಟಗಳಿಗೆ ಸಹಾಯ ಧನವೆಂದು ಬಡ್ಡಿ ರಹಿತ ಸಾಲವನ್ನು ಕೊಡುತ್ತವೆ. ಅದರಲ್ಲಿ ವರ್ಲ್ಡ್ ಬ್ಯಾಂಕ್‌ನಿಂದ ನಾವು ಸಾಲ ಪಡೆದಿದ್ದು, ಎನ್‌ಡಿಡಿಬಿ ಯಿಂದ ಆಪರೇಷನ್ ಫ್ಲಡ್ -1 ಮತ್ತು 2 ಎಂದು ಕೊಟ್ಟು, ಉತ್ತರ ಕರ್ನಾಟಕದಲ್ಲಿ ಕೆಲವು ಒಕ್ಕೂಟಗಳು ಮತ್ತು ನಮ್ಮಲ್ಲಿ ತೊಂದರೆಯಲ್ಲಿರುವ ಒಕ್ಕೂಟಗಳಿಗೆ ಆರ್ಥಿಕ ನೆರವು ನೀಡುವುದಿದೆ. ಈ ಯೋಜನೆಯಲ್ಲಿ ಹಿಂದೆ 1991ರವರೆಗೆ ಕಾಂಗ್ರೆಸ್ ಸರ್ಕಾರವಿದ್ದಾಗ ನಮ್ಮ ಸರ್ಕಾರ ಇದ್ದಾಗಲೂ ನೆರವನ್ನು ಕೊಡುತ್ತಾ ಬಂದಿದ್ದು, ಮತ್ತು ಒಟ್ಟಾರೆ 39 ಕೋಟಿ ರೂಪಾಯಿಗಳಾಗಿವೆ. ಆಡಿಟ್ ವರದಿಗಳ ಪ್ರಕಾರ, ಎಷ್ಟು ತೀರುವಳಿಯಾಗಿದೆ ಎಂದು ಕೆಲವರು ಸದಸ್ಯರು ಕೇಳಿದ್ದಾರೆ. ಮಾನ್ಯ ಸದಸ್ಯರಾದ ರಾಮಯ್ಯ ಮತ್ತು ಹನುಮೇಗೌಡರು ಸಮಗ್ರವಾಗಿ ಪಡೆದ ಸಾಲ ಎಷ್ಟೆಂದು ಕೇಳಿದ್ದಾರೆ.

ಶ್ರೀ ಕರಿಯಣ್ಣ : ಅವರು ನಮ್ಮ ಪ್ರಶ್ನೆಗೆ ಉತ್ತರವನ್ನೂ ಇನ್ನೂ ಹೇಳಿಲ್ಲ. ಅದಕ್ಕೆ ನಮಗೆ ಅವಕಾಶ ಮಾಡಿಕೊಡಿ ಇಲ್ಲವೆ ಇದನ್ನು ಅರ್ಧಗಂಟೆಕಾಲ ಚರ್ಚೆಗೆ ಅವಕಾಶ ಕೊಡಿ ಅವರು ಸಹ ಚರ್ಚೆ ಮಾಡಲಿ.

(ಗೊಂದಲ)

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೇ, ಇದನ್ನು ತಾವು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿ ಕೊಡಿ.

ಶ್ರೀ ಸಿ.ಎಂ. ಲಿಂಗಪ್ಪ : ಮೊದಲು ಸಚಿವರಿಂದ ನಮ್ಮ ಪ್ರಶ್ನೆಗೆ ಉತ್ತರ ಕೊಡಿಸಿ.

(ಗೊಂದಲ)

ಶ್ರೀ ಜಿ. ರಾಜುಗೌಡ : ಅರ್ಧಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಟ್ಟಂಥ ಸಂದರ್ಭದಲ್ಲಿ ಅವರು ಮಾತನಾಡಲಿ.

ಶ್ರೀ ಸಿ.ಎಂ. ಲಿಂಗಪ್ಪ : ಬಚ್ಚೇಗೌಡರವರನ್ನು ನಾವು ಈ ಬಗ್ಗೆ ಕೇಳಿಲ್ಲ. ಮೊದಲು ಸಚಿವರು ಉತ್ತರ ನೀಡಲಿ. ಅವರೇಕೆ ಉತ್ತರ ಕೊಡುತ್ತಾರೆ?

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ನಾನು ಸಹಾಯಧನದ ವಿಚಾರವಾಗಿ ಮಾತ್ರ ಹೇಳಿದೆ ಸಮಗ್ರವಾಗಿ ತನಿಖೆಯಾಗಬೇಕು ಎಂದರೆ ಅರ್ಧಗಂಟೆಗಳ ಕಾಲ ಚರ್ಚೆಯಾಗಲಿ ಎನ್ನುವುದಾದರೆ, ಚರ್ಚೆಯೂ ಆಗಲಿ ಹಾಗೂ ಇದಕ್ಕೊಂದು ಸದನ ಸಮಿತಿಯೂ ರಚನೆಯಾಗಲಿ, ವಿಚಾರಣೆ ಆಗಲಿ ಇದಕ್ಕೇನು ನನ್ನ ಅಭ್ಯಂತರವಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಇವತ್ತು ಏಕೋ ಬೆಳಿಗ್ಗೆಯಿಂದ ನಮ್ಮ ಟೈಮ್ ಸರಿಯಿಲ್ಲ.

ಶ್ರೀ ಬಿ.ಬಿ. ಶಿವಪ್ಪ : ಈ ದಿನ ಶುಕ್ರವಾರ ಬೆಳಿಗ್ಗೆ 10-30 ರಿಂದ 12-30ರ ವರೆಗೆ ರಾಹುಕಾಲ ಇರುವುದರಿಂದ ಹಾಗೂ ಇದೇ ಸಮಯದಲ್ಲಿ ಇಲ್ಲಿ ನಾವು ಸೇರಿರುವುದರಿಂದ ಇದರ ಪ್ರಭಾವದಿಂದಾಗಿ ಇಬ್ಬರೂ ಕೋಪತಾಪಗಳಿಂದ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಈಗ ರಾಹುಕಾಲ ಮುಗಿಯಿತಲ್ಲವೆ?

ಶ್ರೀ ಬಿ.ಬಿ. ಶಿವಪ್ಪ : ಈಗೇನು ರಾಹುಕಾಲ ಮುಗಿಯಿತು, ನೀವು ಈ ದಿನ ಸಭೆ ಕರೆದಿದ್ದೇ ರಾಹುಕಾಲದಲ್ಲಾದ್ದರಿಂದ ಏನೋ ಗೊಂದಲವಾಗಿದೆ, ಆದ್ದರಿಂದ ಐದು ನಿಮಿಷ ಮುಂದಕ್ಕೆ ಹಾಕಿ ಪುನಃ ಸಭೆ ಸೇರಿದರೆ ಅನುಕೂಲವಾಗಬಹುದು ಎಂದು ನನ್ನ ಭಾವನೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಮುರುಘ ರಾಜೇಂದ್ರ, ಸ್ವಾಮಿಗಳು ಈ ರಾಹುಕಾಲದಲ್ಲಿಯೇ ಮದುವೆ ಮಾಡುತ್ತಾರೆ, ನಂತರ ಅವರಿಗೆ ಮಕ್ಕಳಾಗುತ್ತವೆ, ಸಂಸಾರ ಕೂಡ ಚೆನ್ನಾಗಿ ಮಾಡಿಕೊಂಡು ಹೋಗುತ್ತಾರೆ, ಹೀಗಾಗಿ ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಸದ್ಯಕ್ಕೆ ಮಾನ್ಯ ಸಚಿವರು ಉತ್ತರ ಹೇಳಲಿ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೇ ಈಗ ಅಮೃತಘಳಿಗೆ ಇದೆ. ಏನೂ ತೊಂದರೆಯಿಲ್ಲ ಮಾನ್ಯ ಶಿವಕುಮಾರ್ ರವರೇ ತಾವು ಉತ್ತರಿಸಿ. ಇದರ ಬಗ್ಗೆ ಕೆಲವರು ನೋಟೀಸ್ ಕೊಟ್ಟಿದ್ದಾರೆ ಮುಂದಿನ ಸಾರಿ ನಾನು ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಗೌರವಾನ್ವಿತ ಸದಸ್ಯರಾದ ನಮ್ಮ ಪುಟ್ಟರಂಗನಾಥ್ ರವರು ಸಾಲವನ್ನು ಮರುಪಾವತಿ ಮಾಡಿದ್ದಾರೆಯೇ ಎಂದು ಕೇಳಿದ್ದಾರೆ. ಅವರು ಯಾವ ಸಾಲವನ್ನೂ ಮರುಪಾವತಿ ಮಾಡಿಲ್ಲ. ಸರ್ಕಾರ ನೀಡಿದಂಥ ಸಹಾಯಧನ ಅಥವಾ ಸಾಲ 39 ಕೋಟಿ ಏನಿದೆ ಇದನ್ನು ಅವರು ಇದುವರೆವಿಗೂ ಮರುಪಾವತಿಸಿಲ್ಲ. ಸರ್ಕಾರ ಗ್ಯಾರಂಟಿ ಕೊಟ್ಟು ಬೇರೆ ಕಡೆ ಕೊಡಿಸಿರುವ ಸಾಲವನ್ನು, ಅವರು ಕೆಲವು ಭಾಗ ತೀರಿಸಿದ್ದಾರೆ ಇನ್ನು ಕೆಲವು ಭಾಗ ತೀರಿಸಬೇಕಾಗಿದೆ. ಇದರ ಜೊತೆಗೆ ಇದನ್ನು ಏನಾದರೂ ಮನ್ನಾ ಮಾಡುತ್ತೀರಾ ಎಂದು ಕೇಳಿದರು, ಸದ್ಯಕ್ಕೆ ನಾವು ಯಾವುದನ್ನೂ ಮನ್ನಾ ಮಾಡುವಂಥ ಸಂದರ್ಭದಲ್ಲಿ ಇಲ್ಲ.

ಅಧ್ಯಕ್ಷರು : ಮಾನ್ಯ ಲಿಂಗಪ್ಪನವರೇ ನೀವು ಐದಾರು ಜನ ಸೇರಿ ಒಟ್ಟಿಗೆ ನೋಟೀಸ್ ಕಳುಹಿಸಿದರೆ ಅರ್ಧಗಂಟೆಗಳ ಕಾಲ ಚರ್ಚೆಗೆ ಮುಂದಿನ ವಾರದಲ್ಲಿ ಅವಕಾಶ ಕೊಡೋಣ.

ಶ್ರೀ ಸಿ.ಎಂ. ಲಿಂಗಪ್ಪ : ಧನ್ಯವಾದಗಳು. ಆದರೆ ನಾನು ಕೇಳಿದ ಮೂಲ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಲಿಲ್ಲ. ತಮ್ಮ ಸರ್ಕಾರಕ್ಕೆ ಈ ಸಂಸ್ಥೆಯ ಮೇಲಿರುವ ಹತೋಟಿಗಳೇನು ಎಂದು ಕೇಳಿದೆ, ಇದಕ್ಕವರು ಉತ್ತರ ಹೇಳುತ್ತಿಲ್ಲ. ಹತೋಟಿ ಇದೆ ಎಂದು ಹೇಳುವುದಾದರೆ, ಅದನ್ನು ಹೇಳುವುದಕ್ಕೆ ತಮಗೆ ಆಗದಂಥ ಸಂದಿಗ್ಧ ಪರಿಸ್ಥಿತಿ ಏನು? ಬಹುಶಃ ಹತೋಟಿ ಇಲ್ಲವೆಂದು ಕಾಣಿಸುತ್ತದೆ ಹೀಗಾಗಿ ತಾವು ಸದನದಲ್ಲಿ ಸುಳ್ಳು ಹೇಳುತ್ತೀರೆಂದು ನನಗೆ ಅನುಮಾನ ಬರುತ್ತಿದೆ. ಹತೋಟಿ ಇದೆ ಎನ್ನುವುದಾದರೆ ಯಾವ್ಯಾವುದು ಇದೆ ಅದನ್ನಾದರೂ ಹೇಳಬೇಕು.

ಶ್ರೀ ಎಂ. ಚಂದ್ರಪ್ಪ : ನೀವೇ ನಿಮ್ಮ ಮಂತ್ರಿಗಳ ಮೇಲೆ ಈ ರೀತಿ ಸುಳ್ಳು ಹೇಳುತ್ತೀರಿ ಎಂದರೆ ಹೇಗೆ, ಸರ್ಕಾರ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಈ ರೀತಿ ಆದರೆ ಹೇಗೆ? ನಿಮಗೆ ವಿಶ್ವಾಸವಿಲ್ಲವೆ?

(ಗೊಂದಲ)

ಶ್ರೀ ಸಿ.ಎಂ. ಲಿಂಗಪ್ಪ : ಹತೋಟಿ ಇರುವುದು ನಿಜವಾದರೆ ಯಾವುದು ಇದೆ ಅದನ್ನು ಹೇಳಿ. ಇವರಿಗೆ ಏನೇನು ನಿಯಂತ್ರಣ ಇದೆ?

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೇ, ಈ ವಿಷಯದ ಬಗ್ಗೆ ಐದು ಜನ ಸದಸ್ಯರು ನೋಟಿಸ್ ಕೊಟ್ಟಿದ್ದಾರೆ. ಮುಂದಿನ ವಾರ ಅರ್ಧಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆ ತಾವು ಆಗ ಉತ್ತರ ಹೇಳುವುದಕ್ಕೆ ತಯಾರಾಗಿದ್ದೀರಾ?

ಶ್ರೀ ಡಿ.ಕೆ. ಶಿವಕುಮಾರ್ : ಆಗಬಹುದು.

ಕೊಳ್ಳೇಗಾಲದ ಬಸ್ ಡಿಪೋ ಕುರಿತು

566 - ಶ್ರೀ ಜಿ.ಎನ್. ನಂಜುಂಡಸ್ವಾಮಿ (ಕೊಳ್ಳೇಗಾಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಲ್ಲಿ ನಿರ್ಮಾಣವಾಗಿರುವ ಬಸ್ ಡಿಪೋವನ್ನು ಎಂದು ಪ್ರಾರಂಭಿಸಲಾಗುವುದು?

ಆ) ಈ ಡಿಪೋವಿನಿಂದ ಯಾವ ಯಾವ ಸ್ಥಳಗಳಿಗೆ ಎಷ್ಟೆಷ್ಟು ಬಸ್ಸುಗಳ ಸಂಚಾರವನ್ನು ಒದಗಿಸಲಾಗಿದೆ?

ಇ) ಕೊಳ್ಳೇಗಾಲ ವಯಾ ಬೆಂಗಳೂರಿಗೆ ರಾಷ್ಟ್ರೀಯ ಹೆದ್ದಾರಿಯಾದರೂ ತಡೆರಹಿತ ಹಾಗೂ ಸುವಿಹಾರಿ ಬಸ್ಸುಗಳ ಸಂಚಾರವನ್ನು ಇದುವರೆಗೂ ಪ್ರಾರಂಭಿಸದಿರಲು ಕಾರಣವೇನು?

ಈ) ಹಾಗಿದ್ದರೆ ಯಾವ ದಿನದಂದು ಪ್ರಾರಂಭಿಸಲಾಗುವುದು?